

ಎಲ್ಲದಕ್ಕೂ ಕೈಗೆ ಎಟಕುವಂತಹ ಪ್ಯಾಕೇಜ್. ಇದರ ಬೆನ್ನಲ್ಲೇ ಭಾರತದಲ್ಲಿ ನುರಿತ ತಜ್ಞರು ಸಂತಾನಹೀನ ದಂಪತಿಗೆ ಮಕ್ಕಳನ್ನು ಪಡೆಯುವಂತಹ ಅತ್ಯಾಧುನಿಕ ಚಿಕಿತ್ಸೆಗಳಲ್ಲಿ ಪಳಗಿದರು. 90ರ ದಶಕದಲ್ಲಿ ವಿರಳವಾಗಿದ್ದ, ಸಿರಿವಂತರ ಕೈಗೆ ಮಾತ್ರ ನಿಲುಕುವಂತಿದ್ದ ಪ್ರನಾಳ ಶಿಶು ತಂತ್ರಜ್ಞಾನ ಮಧ್ಯಮ ವರ್ಗದವರನ್ನೂ ತಲುಪಲು ಹೆಚ್ಚು ಸಮಯ ಹಿಡಿಯಲಿಲ್ಲ. ಸಣ್ಣ ಪಟ್ಟಣಗಳಲ್ಲೂ 'ಬಂಜೆತನ ನಿವಾರಣೆ', 'ಪ್ರನಾಳ ಶಿಶು ನಿಮ್ಮ ಮಡಿಲಿಗೆ' ಎಂದೆಲ್ಲ ಫಲಕ ತಗುಲಿಸಿಕೊಂಡ ಕ್ಲಿನಿಕ್‌ಗಳು ನಾಯಿಕೊಡೆಗಳಂತೆ ತಲೆಯೆತ್ತಿದವು.

ನೈತಿಕತೆ, ಧಾರ್ಮಿಕ ನಂಬಿಕೆಗಳು ಮೊದಲಾದವುಗಳ ಹಿನ್ನೆಲೆಯಲ್ಲಿ ವಾಣಿಜ್ಯ ಉದ್ದೇಶದಿಂದ ನಡೆಸುವ ಬಾಡಿಗೆ ತಾಯ್ತನಕ್ಕೆ ನಿಷೇಧವಿರುವ ಇಂಗ್ಲೆಂಡ್, ಇಸ್ರೇಲ್, ಅಮೆರಿಕದ ಕೆಲವು ರಾಜ್ಯಗಳು, ಆಸ್ಟ್ರೇಲಿಯ ಮೊದಲಾದ ಕಡೆಯಿಂದ ಮಕ್ಕಳಿಲ್ಲದ ದಂಪತಿಯ ದೃಷ್ಟಿ ಭಾರತದ ಕಡೆ ಹೊರಳಿತು. ಪ್ರನಾಳ ಶಿಶು (ಐವಿಎಫ್) ಕ್ಲಿನಿಕ್‌ಗಳಿಗೆ ಭೇಟಿ ನೀಡಿದ ವಿದೇಶಿ ದಂಪತಿಗಳು ಬಾಡಿಗೆ ತಾಯ್ತನವೆಂಬ ಹೊಸ ಉದ್ಯಮದ ಬೀಜವನ್ನು ಬಿತ್ತಿದರು. ಬಡ, ಗ್ರಾಮೀಣ ಹೆಣ್ಣುಮಕ್ಕಳು ಹಣದ ಅನಿವಾರ್ಯತೆಯ ಕಾರಣದಿಂದ ಇದಕ್ಕೆ ಸುಲಭವಾಗಿ ಬಲಿ ಪಶುವಾದರು. ಒಪ್ಪಂದ ನಡೆಯುವುದು ಕ್ಲಿನಿಕ್ ಮತ್ತು ದಂಪತಿಯ ಮಧ್ಯೆ. ಮಧ್ಯವರ್ತಿಯಿಂದಾಗಿ ಕೈಗೆ ಸಿಗುವ ಹಣವು ಅಲ್ಪ. ಜೊತೆಗೆ ಆರೋಗ್ಯವನ್ನು, ಜೀವವನ್ನು ಒತ್ತೆ ಇಡಬೇಕಾದಂತಹ ಪರಿಸ್ಥಿತಿ.

'ಭಾರತವೆಂದರೆ ಗರ್ಭಗಳು ಬಾಡಿಗೆಗೆ ಇವೆ ಎಂಬಂತಹ ಧೋರಣೆ ವಿದೇಶೀಯರಲ್ಲಿದೆ. ಸಲಿಂಗಿ ದಂಪತಿ, ಸಿಂಗಲ್ ಪೇರೆಂಟ್.. ಹೀಗೆ ಯಾರು ಬೇಕಾದರೂ ಇಲ್ಲಿಗೆ ಬಂದು ಬಾಡಿಗೆ ತಾಯಿ ಮೂಲಕ ಮಗು ಪಡೆದು ಎತ್ತಿಕೊಂಡು ಹೋಗಬಹುದು ಎಂಬ ಅಭಿಪ್ರಾಯ ಅಲ್ಲಿಯವರಲ್ಲಿದೆ' ಎನ್ನುತ್ತಾರೆ ಮಸೂದೆಯ ಕರಡಿನ ಬಗ್ಗೆ ತಮ್ಮ ಅಭಿಪ್ರಾಯ ನೀಡಿದ ಬೆಂಗಳೂರಿನ ಐವಿಎಫ್ ತಜ್ಞೆ ಡಾ.ದೇವಿಕಾ ಗುಣಶೀಲ.

ದೆಹಲಿ, ಮುಂಬಯಿ, ಅಹ್ಮದಾಬಾದ್, ಚೆನ್ನೈ ಮೊದಲಾದ ನಗರಗಳಲ್ಲಿ ಇದೊಂದು ಉದ್ಯಮದಂತೆ ವ್ಯಾಪಕವಾಗಿದ್ದು, ಬೆಂಗಳೂರಿನಲ್ಲಿ ತೀರಾ ಕಡಿಮೆ ಎನ್ನಬಹುದು. ಕೆಲವೊಂದು ಐವಿಎಫ್ ಕ್ಲಿನಿಕ್‌ಗಳು ಕದ್ದುಮುಚ್ಚಿ ನಡೆಯುತ್ತಿದ್ದು, ಬಹಿರಂಗವಾಗಿ ಎಲ್ಲೂ ಹೇಳಿಕೊಂಡಿಲ್ಲ.

2002ರಲ್ಲಿ ಆರಂಭವಾದ ವಾಣಿಜ್ಯದ ಹಿತಾಸಕ್ತಿಗಳನ್ನು ಹೊಂದಿದ ಈ ಬಾಡಿಗೆ ತಾಯ್ತನ ಮೊದಲು 'ಗಪ್‌ಚುಪ್' ಆಗಿ ನಡೆದರೂ ಕೆಲವೊಂದು ಅಹಿತಕರ ಘಟನಾವಳಿಗಳು, ಗೋಜಲುಗಳು ಇದರ ಕರಾಳ ಮುಖವನ್ನು ತೋರಿಸತೊಡಗಿದವು. ಹೆಣ್ಣುಮಕ್ಕಳ ಶೋಷಣೆ ನಡೆಸುವ ಇದು ಬೇಕೆ ಅಥವಾ ಬೇಡವೆ ಎಂಬುದರ ಕುರಿತು ಚರ್ಚೆ ಆರಂಭವಾಗಿದ್ದು 2008ರಲ್ಲೇ.

### ವಂಚನೆಯ ಸರಮಾಲೆ

★ ಆಗ ಚರ್ಚೆಯನ್ನು ಹುಟ್ಟು ಹಾಕಿದ್ದು ಜಪಾನಿ ದಂಪತಿಯ ಅನಿರೀಕ್ಷಿತ ನಿರ್ಧಾರಗಳು ಹಾಗೂ ಕಾನೂನು ತೊಡಕುಗಳು. ಅಲ್ಲಿಯ ವೈದ್ಯ ದಂಪತಿ ಬಾಡಿಗೆ ತಾಯಂದಿರ ತವರೂರು ಎಂದೇ ಹೆಸರಾದ ಗುಜರಾತ್‌ನ ಆನಂದ್‌ನಲ್ಲಿ ಬಾಡಿಗೆ ತಾಯಿಯ ಮೂಲಕ ಹೆಣ್ಣು ಮಗು ಪಡೆದರು. ಆದರೆ ಮಗು ಹುಟ್ಟುವ ಮೊದಲೇ ಆ ದಂಪತಿ ವಿಚ್ಛೇದನ ಪಡೆದು ಬೇರೆಯಾಗಿದ್ದರು. ಆ ನತದೃಷ್ಟ ಮಗು ಮಾಂಜಿಗೆ ಪೋಷಕರು ಮಾತ್ರವಲ್ಲ, ಪೌರತ್ವ ಕೂಡಾ ಪಡೆಯದಂತಹ ಪರಿಸ್ಥಿತಿ. ಜಪಾನ್ ಹಾಗೂ ಭಾರತದ ಕ್ಲಿಷ್ಟ ಕಾನೂನುಗಳ ಮಧ್ಯೆ ಸಿಲುಕಿಕೊಂಡ ಮಾಂಜಿ ಕೊನೆಗೆ ಜಪಾನಿನ ತನ್ನ ಅಜ್ಜಿಯ ಮಡಿಲು ಸೇರಿದರೂ ಆಕೆಗೆ ಇನ್ನೂ ಅಲ್ಲಿಯ ಪೌರತ್ವ ಸಿಗದೆ ತ್ರಿಶಂಕು ಸ್ಥಿತಿಯಲ್ಲಿದೆ. ಇದಕ್ಕೆ ಕಾರಣ ಜಪಾನ್‌ನಲ್ಲಿ ಬಾಡಿಗೆ ತಾಯ್ತನಕ್ಕೆ ಕಾನೂನಿನ ಮಾನ್ಯತೆ ಇಲ್ಲದಿರುವುದು.

★ ಇನ್ನೊಂದು ಪ್ರಕರಣ ಆಸ್ಟ್ರೇಲಿಯದ ದಂಪತಿಗೆ ಸಂಬಂಧಿಸಿದ್ದು. ಐವಿಎಫ್ ಮೂಲಕ ದೆಹಲಿಯ ಬಾಡಿಗೆ ತಾಯಿಗೆ ಜನಿಸಿದ ಅವಳಿ ಮಕ್ಕಳ

**ಈ ಬಾಡಿಗೆ ತಾಯ್ತನದ್ದು ಒಂದು ಅಂದಾಜಿನ ಪ್ರಕಾರ ಸದ್ಯ 2 ಶತಕೋಟಿ ಡಾಲರ್ ವಹಿವಾಟು. ಭಾರತದಲ್ಲಿ ಪ್ರತಿ ವರ್ಷ 25,000 ಮಕ್ಕಳು ಬಾಡಿಗೆ ತಾಯಂದಿರ ಮೂಲಕ ಜನಿಸುತ್ತಾರೆ.**



## ಮಸೂದೆ ಏನು ಹೇಳುತ್ತದೆ?

- ದೇಶದಲ್ಲಿ ವಾಣಿಜ್ಯ ಉದ್ದೇಶದ ಬಾಡಿಗೆ ತಾಯ್ತನದ ಮೇಲೆ ಸಂಪೂರ್ಣ ನಿಷೇಧ.
- ಸಂಬಂಧಿಕರು ಬಾಡಿಗೆ ತಾಯಾಗಬಹುದು. ಅಂದರೆ ದಂಪತಿಯ ತಾಯಿ, ಸಹೋದರಿ, ಅತ್ತಿಗೆ, ಸಹೋದರ ಸಂಬಂಧಿ.. ಆಕೆ ಕೂಡಾ ಮದುವೆಯಾಗಿದ್ದು, ಒಂದಾದರೂ ಮಗುವಿರಬೇಕು. ಆದರೆ ಇಲ್ಲಿಯೂ ಕೂಡಾ ಇಡೀ ಪ್ರಕ್ರಿಯೆಗೆ ತಗಲುವ ಚಿಕಿತ್ಸಾ ವೆಚ್ಚವನ್ನು ಮಾತ್ರ ಭರಿಸಬೇಕು.
- ಬಾಡಿಗೆ ತಾಯಿಯ ಮೂಲಕ ಜನಿಸಿದ ಮಗುವಿನ ಪೋಷಕರ ಗುರುತು ಕಾನೂನುಬದ್ಧವಾಗಿದ್ದು, ಪಾರದರ್ಶಕವಾಗಿರಬೇಕು.
- ಕಾನೂನುಬದ್ಧವಾಗಿ ವಿವಾಹವಾದ ದಂಪತಿ ಮಾತ್ರ ಬಾಡಿಗೆ ತಾಯಿ ಮೂಲಕ ಮಗು ಪಡೆಯಬಹುದು. ದಂಪತಿಯಲ್ಲಿ ಒಬ್ಬರಿಗಾದರೂ ಬಂಜೆತನದ ಸಮಸ್ಯೆಯಿರಬೇಕು. ಮದುವೆಯಾಗಿ ಐದು ವರ್ಷಗಳಾಗಿರಬೇಕು. ಬೇರೆ ಮಕ್ಕಳು ಅಂದರೆ ಮೊದಲ ವಿವಾಹದಿಂದ ಜನಿಸಿದ ಮಗು ಅಥವಾ ದತ್ತು ಮಕ್ಕಳಿರಕೂಡದು.
- ವಿದೇಶೀಯರು, ವಿದೇಶಗಳಲ್ಲಿ ನೆಲೆಸಿರುವ ಭಾರತೀಯರಿಗೆ, ಅನಿವಾಸಿ ಭಾರತೀಯರಿಗೆ ಈ ಸೌಲಭ್ಯವಿಲ್ಲ.
- ಅವಿವಾಹಿತರು, ಸಲಿಂಗಿಗಳು, ಸಿಂಗಲ್ ಪೇರೆಂಟ್, ಕೂಡಿಕೆ ಮಾಡಿಕೊಂಡವರು ಬಾಡಿಗೆ ತಾಯಿಯ ಮೂಲಕ ಮಗು ಪಡೆಯುವಂತಿಲ್ಲ.
- ದಂಪತಿಯ ವಯಸ್ಸು: ಪತ್ನಿಗೆ 23– 50 ಹಾಗೂ ಪತಿಗೆ 26–55.
- ಬಾಡಿಗೆ ತಾಯ್ತನ ನಿಯಂತ್ರಿಸಲು ಮಂಡಳಿಗಳನ್ನು ಕೇಂದ್ರ ಹಾಗೂ ರಾಜ್ಯ ಮಟ್ಟದಲ್ಲಿ ಸ್ಥಾಪಿಸಲಾಗುವುದು.
- ಕಾನೂನು ಉಲ್ಲಂಘಿಸಿದವರಿಗೆ 10 ಲಕ್ಷ ದಂಡ ಹಾಗೂ 10 ವರ್ಷ ಸೆರೆವಾಸ.
- ಅಂಡಾಣು ದಾನಕ್ಕೆ ನಿಷೇಧ.